ಅಂಥದ್ದೇನು ಕೇಳಬಾರದ್ದು ಕೇಳಿದೆ? ಛೇ! ದೇಶ ಬಿಟ್ಟು ದೇಶಕ್ಕೆ ಬಂದಿರುವ ಹುಡುಗಿಗೆ ಒಂದು ಮಟ್ಟದ ತಿಳಿವಳಿಕೆ ಇರುತ್ತದೆ ಎಂದುಕೊಂಡೆ. ನಾನೇನು ರೇಪ್ ಮಾಡಿದೆನಾ ಅವಳಷ್ಟು ನೊಂದುಕೊಳ್ಳಲು, ಕೋಪಿಸಿಕೊಳ್ಳಲು. ಥೂ ಈ ಹುಡುಗಿಯ ಸಹವಾಸವೇ ಸಾಕೆನಿಸಿತು.

ಇಷ್ಟಕ್ಕೂ ನಾನು ಮದುವೆಯಾಗಲೇ ಬೇಕಿದ್ದರೆ ಇಂತಹದ್ದೇ ಒಬ್ಬಳನ್ನು ಆರಿಸಿಕೊಳ್ಳಬೇಕಿತ್ತು. ಆದರೆ ಮದುವೆಯಾಗುವ ಉದ್ದೇಶವೇ ಇಲ್ಲದಿದ್ದ ನಾನಾದರೂ ಏನು ಮಾಡಬೇಕು? ಸಾಗರದಾಚೆಯ ಈ ದೂರದ ಜರ್ಮನಿಯಲ್ಲಿ ನನಗಿಷ್ಟಬಂದಂತೆ ಬದುಕುವ ಯಾವ ನಿರ್ಬಂಧಗಳೂ ನನಗಿರಲಿಲ್ಲ. ಕಾಮಕ್ಕೆ ಇಲ್ಲದ ಪಾವಿತ್ರ್ಯತೆ, ಪ್ರಾಶಸ್ತ್ಯ ಕೊಡುವ ಜನರನ್ನು ಕಂಡರಾಗದ ನಾನು ಮದುವೆಯಿಲ್ಲದೆ ಸಂಬಂಧ ಒಲ್ಲೆನೆನ್ನುವವಳನ್ನು ತೆಗೆದುಕೊಂಡು ಮಾಡಬೇಕಾದುದಾದರೂ ಏನು ಎಂದುಕೊಂಡೆನಾದರೂ ಅವಳನ್ನು ಕಂಡ ಮೇಲೆ ನನ್ನೊಳಗೆ ಆಗುತ್ತಿದ್ದ ಅವಳ ಕುರಿತ ಸೆಳತಕ್ಕೆ ಒಂದೇ ಒಂದು ಸಣ್ಣ ಕಾರಣವನ್ನು ಕೊಡಲಾರದಾಗಿದ್ದೆ.

ಮುಂದೆ ಒಂದು ತಿಂಗಳು ಅವಳು ನನ್ನ ಕಣ್ಣು ತಪ್ಪಿಸುತ್ತಾ ಓಡಾಡಿಕೊಂಡಿದ್ದಳು. ನಾನೂ ಹಾಗೇ ನಿರ್ಭಾವುಕವಾಗಿ ಅಗತ್ಯ ಮಾತುಗಳಿಗೆ ಪ್ರತಿಕ್ರಿಯಿಸುತ್ತಾ ನನ್ನ ಪಾಡಿಗೆ ನಾನಿರುತ್ತಿದ್ದೆ.

ಆ ನ್ಯೂ ಇಯರ್ ಪಾರ್ಟಿಗೆ ಅವಳು ಬರುತ್ತಾಳೆಂದುಕೊಂಡಿರಲಿಲ್ಲ. ತೊಡೆಯ ಅರ್ಧಕ್ಕಿಂತಲೂ ಹೆಚ್ಚು ಭಾಗವನ್ನು ಅನಾವರಣಗೊಳಿಸುವ ಪುಟ್ಟ ಚೆಡ್ಡಿಯಂತಹ ದಿರಿಸನ್ನು ಧರಿಸಿ, ಹೊಕ್ಕುಳು ಕಾಣುವಂತೆ ಮೇಲಂಗಿ ಹಾಕಿ ಬಳುಕುತ್ತಾ ಬಂದವಳನ್ನು ಕಂಡು ಒಂದು ಕ್ಷಣ ಎದೆ ಬಡಿತ ನಿಂತೇ ಹೋಯಿತು. ತುಟಿಗಳು ಒಣಗಹತ್ತಿದವು. ನನ್ನಂಥವರನ್ನು ಪೂರ್ಣವಾಗಿ ಮುಗಿಸಿಬಿಡಲೆಂದೇ ಈ ತರಹದ ಬಟ್ಟೆ ಧರಿಸಿ ಬಂದಿರಬೇಕೆನಿಸಿತು.

ಬಿರಡೆ ತೆರೆದ ಶಾಂಪೇನಿನ ನೊರೆ ಎಲ್ಲೆಂದರಲ್ಲಿ ಚೆಲ್ಲುತ್ತಾ ಅವಳ ತಲೆ ಮೇಲೂ ಬಿದ್ದು ನಿಧಾನವಾಗಿ ಕದಪಿಗಿಳಿಯುತ್ತಾ... ಆ ದಿನ ಅವಳು ತುಸು ಹೆಚ್ಚೇ ಧಾರಾಳವಾಗಿದ್ದಳು. ಮುಕ್ತವಾಗಿ ವ್ಯವಹರಿಸುತ್ತಿದ್ದಳು. ಮೋಹಿಟ್ಟೋದ ಹನಿಗಳು ಅವಳ ಧಮನಿಗಳನ್ನು ಉತ್ತೇಜಿಸುತ್ತಿತ್ತು. ತುಸು ಕೆಂಪು ರಂಗಿನಿಂದ ಸ್ಫುರಿಸುತ್ತಿದ್ದ ಅವಳ ಮುಖವನ್ನು ಆಗಾಗ್ಗೆ ನನ್ನ ಭುಜ ತೋಳುಗಳಿಗೆ ತಾಕಿಸುತ್ತಾ, ಮೋಹಕವಾಗಿ ಬಳುಕುತ್ತಾ, ನಿಕಟವಾಗುತ್ತಾ, ದೂರ ಸರಿಯುತ್ತಾ ನಲಿಯ ತೊಡಗಿದಳು. ನನ್ನ ಮೈ ಕಾವೇರುತ್ತಾ ಅಂಗಾಂಗಗಳು ಸೆಟೆದುಕೊಳ್ಳತೊಡಗಿದವು.

ಪಾರ್ಟಿ ಮುಗಿದು ವಾಪಸಾಗುವಾಗ ನಶೆಯಿಂದ ತೂಗುತ್ತಿದ್ದ ಮೈಯನ್ನ ನನ್ನೊತ್ತಿಗೆ ಆನಿಸಿ ಭುಜದ ಮೇಲೆ ಅವಳ ವಾಲಿದ್ದ ತಲೆಯಿರಿಸಿ ಮೌನದಿಂದ ನಡೆದು ಬರುತ್ತಿದ್ದಳು. ನನ್ನ ಆಕಾಂಕ್ಷೆಯು ಕಿಚ್ಚಾಗಿ ಇನ್ನು ಭರಿಸಲು ಸಾಧ್ಯವೇ ಇಲ್ಲವೆನ್ನಿಸಿ ಅವಳ ಮನೆಯ ಸಮೀಪ ಬಂದೊಡನೆ 'ಬೈ' ಎಂದವಳ ಭುಜ ಹಿಡಿದು 'ಹೇ ಪ್ಲೀಸ್ ವಿಲ್ ಯು ಕಮ್ ಫಾರ್ ಒನ್ ನೈಟ್ ಸ್ಟಾಂಡ್ ವಿತ್ ಮಿ' ಎಂದೆ ಆರ್ತವಾಗಿ. ಝುರ‍್ರನೆ ನಶೆಯಿಳಿದಂತೆ ರೌದ್ರವತಾರತಾಳಿ 'ಯೂ ಸ್ಕೌಂಡ್ರಲ್... ವಾಡ್ ಡೂ ಯೂ ಥಿಂಕ್ ಆಫ್ ಮಿ?' ಎನ್ನುತ್ತಾ ಅವಳ ಅಪಾರ್ಟ್‌ಮೆಂಟಿನ ಒಳಗೆ ಹಿಂತಿರುಗಿ ನೋಡದಂತೆ ಪ್ರವೇಶಿಸಿದಳು.

ಮೈ ದಹಿಸುತ್ತಿದ್ದ ಕಾಮದ ಮೇಲೆ ನಿರಾಶೆಯ ತಣ್ಣೀರು ಚೆಲ್ಲಿಕೊಂಡು ನನ್ನ ಮನೆಯತ್ತ ಹೋದೆ. ಇಲ್ಲ, ಇವಳಿಂದ ಪದೇ ಪದೇ ನಿರಾಶೆಗೊಳಗಾಗುವ ಪ್ರಕ್ರಿಯೆ ನನಗೆ ತಪ್ಪಿದ್ದಲ್ಲ. ಇನ್ನು ನಾನು ಇವಳಿಂದ ಸಂಪೂರ್ಣ ವಿಮುಖನಾಗಬೇಕು. ಬೇಕು ಬೇಕು ಎನ್ನುವಂತೆ ಹತ್ತಿರ ಬಂದು ದೂರಾಗುತ್ತಾಳೆ. ನಾನು ಬಯಕೆಯಿಂದ ಬಸವಳಿದಾಗ ಕನಿಕರಿಸುತ್ತಾಳೆ. ಅಥವಾ ಹಾಗೆ